

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ದೇಶಾಭಿಮಾನ ಯಾರಲ್ಲಿದೆ?

ಗಣಕಯಂತ್ರ (computer) ಬಳಸುವವರಿಗೆ ಒಳ್ಳೆಯ ಮನಸ್ಸುಳ್ಳ ಅವರ ಸ್ನೇಹಿತರು ಮತ್ತು ಹಿತೈಷಿಗಳು ಆಗಾಗ್ಗೆ ಈ-ಮೇಲ್ ನಲ್ಲಿ ಅವರಿಗೆ ಪ್ರಿಯವಾದ ಸೂಕ್ತಿಗಳನ್ನು ಮತ್ತು ಕಥಾನಕಗಳನ್ನು ಕಳುಹಿಸುವುದು ನಿಮಗೆ ತಿಳಿದೇ ಇದೆ. ನಮಗೆ ಬಂದ ಅಂತಹ ಒಂದು ರೋಚಕ ಕಥಾನಕ ನಾವು ಮಾಡಿದ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಹೀಗಿದೆ: ಒಬ್ಬ ಶಾಲಾಬಾಲಕನಿಗೆ ಹಣದ ಅವಶ್ಯಕತೆ ಬಹಳವಾಗಿತ್ತು. ಅವನಿಗೆ ಬೇಕಾಗಿದ್ದುದು ಕೇವಲ 50 ರೂ.ಗಳು. ಅದಕ್ಕಾಗಿ ಅವನು ನಿತ್ಯವೂ ದೇವರನ್ನು ಪ್ರಾರ್ಥಿಸತೊಡಗಿದ. ಅನೇಕ ವಾರಗಳ ಕಾಲ ಬೇಡಿಕೊಂಡರೂ ಅವನ ಇಷ್ಟಾರ್ಥ ಕೈಗೂಡಲಿಲ್ಲ. ಕೊನೆಗೆ ಅವನು ದೇವರಿಗೆ ಒಂದು ಅಂಚೆ ಕಾರ್ಡನ್ನು ಬರೆದು 50 ರೂ. ಕಳುಹಿಸಿಕೊಡಲು ಕೇಳಿಕೊಂಡ. ಅಂಚೆಯ ಕಾರ್ಡಿನ ಮೇಲೆ "ದೇವರು, ಭಾರತ" ಎಂದಷ್ಟೇ ವಿಳಾಸವನ್ನು ಬರೆದಿದ್ದ. ಅಂಚೆಯ ಅಧಿಕಾರಿಗಳು ಅದನ್ನು ನೋಡಿ ತಬ್ಬಿಬ್ಬಾಗಿ ಎಲ್ಲಿಗೆ ಮುಟ್ಟಿಸಬೇಕೆಂದು ತಿಳಿಯದೆ ದೆಹಲಿಯಲ್ಲಿರುವ ರಾಷ್ಟ್ರಪತಿ ಭವನಕ್ಕೆ ರವಾನಿಸಿದರು. ಮಕ್ಕಳ ಮೇಲೆ ಅಪಾರ ಪ್ರೀತಿ ಇರುವ ಅಂದಿನ ರಾಷ್ಟ್ರಪತಿಗಳಾಗಿದ್ದ ಅಬ್ದುಲ್ ಕಲಾಂರವರು ಅದನ್ನು ನೋಡಿ ಮುಗುಳ್ನಕ್ಕರು. ಬಾಲಕನು ದೇವರ ಮೇಲೆ ಇಟ್ಟಿರುವ ನಂಬುಗೆಯನ್ನು ಕಳೆಯಬಾರದೆಂದು ಕಲಾಂರವರು ತಮ್ಮ ಜೇಬಿನಿಂದ ಕಾರ್ಯದರ್ಶಿಗೆ 20 ರೂ. ಗಳನ್ನು ಕೊಟ್ಟು ಆ ಬಾಲಕನಿಗೆ ಕಳುಹಿಸಲು ಸೂಚಿಸಿದರು. ಹೆಚ್ಚಿನ ಹಣವನ್ನು ಕಳುಹಿಸಿ ಆ ಹುಡುಗ ದುಂದುವೆಚ್ಚ ಮಾಡುವುದನ್ನು ಕಲಿಸಲು ಅವರಿಗೆ ಇಷ್ಟವಿರಲಿಲ್ಲ. ಅಧಿಕಾರಿಗಳು ರಾಷ್ಟ್ರಪತಿಗಳ ನಿರ್ದೇಶನದಂತೆ ಆ ಹಣವನ್ನು ಬಾಲಕನಿಗೆ ಕಳುಹಿಸಿದರು. ಹಣ ಕೈಗೆ ಸಿಕ್ಕಾಗ ಬಾಲಕನಿಗೆ ಆದ ಸಂತೋಷಕ್ಕೆ ಪಾರವೇ ಇಲ್ಲ. ಆ ಹುಡುಗ ಖುಷಿಯಿಂದ ದೇವರಿಗೆ ತನ್ನ ಕೃತಜ್ಞತೆಯನ್ನು ಸೂಚಿಸಿ ಮತ್ತೆ ಒಂದು ಪೋಸ್ಟ್ ಕಾರ್ಡ್ ಹೀಗೆ ಬರೆದ: "ಪ್ರಿಯ ದೇವರೇ, ನನ್ನ ಬೇಡಿಕೆಯನ್ನು ಮನ್ನಿಸಿ ನೀನು ಹಣ ಕಳುಹಿಸಿದ್ದಕ್ಕಾಗಿ ವಂದನೆಗಳು. ಆದರೆ ನೀನು ದೆಹಲಿಯ ರಾಷ್ಟ್ರಪತಿ ಭವನದ ಮುಖಾಂತರ ಕಳುಹಿಸಬಾರದಾಗಿತ್ತು. ಅಲ್ಲಿರುವ ಅಧಿಕಾರಿಗಳು ನೀನು ಕಳುಹಿಸಿದ ಹಣದಲ್ಲಿ 30 ರೂ. 'ತೆರಿಗೆ' ಮುರಿದುಕೊಂಡು ಉಳಿದ 20 ರೂ. ಗಳನ್ನು ಮಾತ್ರ ನನಗೆ ಕಳುಹಿಸಿದ್ದಾರೆ"!.....

ಉತ್ತರ ಕರ್ನಾಟಕದಲ್ಲಿ ನೆರೆ ಹಾವಳಿಯಿಂದ ತತ್ತರಿಸಿರುವ ಗ್ರಾಮೀಣ ಜನರಿಗೆ ಸೂರು ಕಲ್ಪಿಸಿಕೊಡಲು ಸರ್ಕಾರ ಕೈಗೊಂಡಿರುವ 'ಆಸರೆ' ಯೋಜನೆಯ ಶಂಕುಸ್ಥಾಪನಾ ಸಮಾರಂಭಗಳು ಭರದಿಂದ ಸಾಗಿವೆ. ಖಾಸಗಿ ಸಂಘ-ಸಂಸ್ಥೆಗಳು ಮತ್ತು ಸಾರ್ವಜನಿಕರು ಈ ಯೋಜನೆಗೆ ಕೈಜೋಡಿಸಿದ್ದಾರೆ. ಸಾರ್ವಜನಿಕರು ಸಂಗ್ರಹಿಸುವ ದೇಣಿಗೆ, ಸರ್ಕಾರಕ್ಕೆ ಕೊಡುವ ದೇಣಿಗೆ ಇವೆರಡೂ ಸರಿಯಾಗಿ ಬಳಕೆಯಾಗುವುದಿಲ್ಲ, ದುರುಪಯೋಗವೇ ಜಾಸ್ತಿ ಎಂಬ ಕೂಗು ಕೇಳಿಬರುತ್ತಿದೆ. ಸಂಘ-ಸಂಸ್ಥೆಗಳು ಸರ್ಕಾರಕ್ಕೆ ದೇಣಿಗೆಯನ್ನು ಕೊಡುವ ಬದಲು ತಾವೇ ನೇರವಾಗಿ ಯೋಜನೆಯನ್ನು ಕಾರ್ಯಗತಗೊಳಿಸುವುದು ಒಳ್ಳೆಯದು ಎಂಬ ಮಾತೂ ಸಹ ಕೇಳಿಬರುತ್ತಿದೆ. ಇದು ಯಾವುದೇ ಸರ್ಕಾರಕ್ಕೆ ಮರ್ಯಾದೆ ತರುವಂತಹ ಸಂಗತಿಯಲ್ಲ. ಇದನ್ನು ಮಿಥ್ಯಾರೋಪವೆಂದು ಅಷ್ಟು ಸುಲಭವಾಗಿ ತಳ್ಳಿ ಹಾಕಲೂ ಬರುವಂತಿಲ್ಲ. ಕಿರುತೆರೆಯ ಪ್ರಸಿದ್ಧ ನಿರ್ದೇಶಕರಾದ ಟಿ. ಎನ್. ಸೀತಾರಾಂ ರವರು ಇಂತಹ ಕೆಲವು ಕಾಲ್ಪನಿಕ ಪ್ರಸಂಗಗಳನ್ನು ತಮ್ಮ ಇತ್ತೀಚಿನ ಧಾರಾವಾಹಿಯೊಂದರಲ್ಲಿ ಚಿತ್ರಿಸುವ ಯಶಸ್ವೀ ಪ್ರಯತ್ನ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಗುರುವರ್ಯರಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಬದುಕಿನ ವಾಸ್ತವತೆಯನ್ನು ಕುರಿತು ಹೇಳುತ್ತಿದ್ದ ಈ ಮುಂದಿನ ವ್ಯಾವಹಾರಿಕ ಮಾತುಗಳು ನೆನಪಾಗುತ್ತಿವೆ: "ಜೇನುಗೂಡಿಗೆ ಕೈ ಹಾಕಿ ಜೇನುತುಪ್ಪ ಇಳಿಸುವ ಸಾಹಸಿಗನ ಕೈಗೆ ಜೇನುತುಪ್ಪ ಹತ್ತಿರುತ್ತದೆ. ಕಷ್ಟಪಟ್ಟು ಜೇನುತುಪ್ಪ ಸಂಗ್ರಹಿಸಿಕೊಟ್ಟ ಆ ವ್ಯಕ್ತಿ ತನ್ನ ಕೈಗೆ ಹತ್ತಿದ ಜೇನುತುಪ್ಪವನ್ನು ನೆಕ್ಕಬಾರದು ಎಂದು ನೀವು ನಿರೀಕ್ಷಿಸಿದರೆ ಹೇಗೆ?" ಆದರೆ ಈಗ ಕಾಲ ಬದಲಾವಣೆಯಾಗಿದೆ. ಅಲ್ಪ ಸ್ವಲ್ಪ ನೆಕ್ಕಿದರೆ ಪರವಾಗಿಲ್ಲ, ಆದರೆ ಲೆಕ್ಕವಿಲ್ಲದಷ್ಟು ನೆಕ್ಕುವ ಧೂರ್ತರಿದ್ದಾರೆ. ಅಂಥವರನ್ನು ಪ್ರಜ್ಞಾವಂತ ಜನರೇ ಜೇನುಹುಳುಗಳಂತೆ ಬೆನ್ನಟ್ಟಿ ಬಲವಾಗಿ ಕಚ್ಚಿ ನೆಲಕ್ಕೆ ಬಿದ್ದು ದಿಂಡುರುಳುವಂತೆ ಮಾಡಬೇಕಾಗಿದೆ! ಅದಕ್ಕಾಗಿ ನಿವೃತ್ತ ನ್ಯಾಯಾಧೀಶರೊಬ್ಬರನ್ನು ವಿಚಾರಣಾಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿದರೆ ಅವರು ತನಿಖೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸುವ ವೇಳೆಗೆ ಮತ್ತು ಸರ್ಕಾರ ಅದನ್ನು ಪರಿಶೀಲಿಸಿ ಕ್ರಮಕೈಗೊಳ್ಳುವ ವೇಳೆಗೆ ಇಳಿಸಿದ ಜೇನುತುಪ್ಪವೆಲ್ಲಾ ಖಾಲಿಯಾಗಿರುತ್ತದೆ ಇಲ್ಲವೇ ಕೊಳೆತು ನಾರುತ್ತಿರುತ್ತದೆ! ಎಷ್ಟೋ ವೇಳೆ ಮಂತ್ರಿಮಾನ್ಯರ ಕೃಪಾಪೋಷಿತ ಜನರ ಅಕ್ರಮಗಳು 'ಅಕ್ರಮ ಸಕ್ರಮ' ಯೋಜನೆಯಡಿಯಲ್ಲಿ ಸಕ್ರಮಗೊಂಡರೆ ಆಶ್ಚರ್ಯವೇನೂ ಇಲ್ಲ. ಆಗ ಪಾಪ ಲೋಕಾಯುಕ್ತರಾದರೂ ಏನುಮಾಡಲು ಸಾಧ್ಯ!

ಜೀವನ ಮೌಲ್ಯಗಳ ಪುನರುತ್ಥಾನವಾಗದೆ ಯಾವ ಕಾನೂನಿನಿಂದಲೂ ಸಮಾಜ ಸುಧಾರಣೆ ಮಾಡುವುದು ಅಸಾಧ್ಯ. ಒಮ್ಮೆ ನಮ್ಮ 'ಸದ್ಧರ್ಮ ನ್ಯಾಯಪೀಠ'ದ ಮುಂದೆ ಮಠದ ಆಸ್ತಿಗೆ ಸಂಬಂಧಪಟ್ಟಂತೆ ಬಂದ ಪ್ರಕರಣವೊಂದರಲ್ಲಿ ವಿಚಾರಣೆ ನಡೆಸಿ ಸಾಕ್ಷಿಗಳ ಹೇಳಿಕೆಯ ಮೇರೆಗೆ ಮತ್ತು ಸಾಂದರ್ಭಿಕ ಆಧಾರದ ಮೇಲೆ ಯಾರು ಯಾರಿಗೆ ಎಷ್ಟೆಷ್ಟು ಹಣ ಕೊಡಬೇಕೆಂದು ತೀರ್ಮಾನಿಸಿದೆವು. ಜಗಳವಾಡುತ್ತಿದ್ದ ವ್ಯಕ್ತಿಗಳ ಹತ್ತಿರದ ಸಂಬಂಧಿಗಳು ಹಿರಿಯ ವಯಸ್ಸಿನ ಯಜಮಾನರು. ಅವರಿಗೆ ಯಾವ ನೋಟೀಸೂ ಹೋಗದ ಕಾರಣ ವಿಚಾರಣೆಯ ಸಂದರ್ಭದಲ್ಲಿ ಹಾಜರಿರಲಿಲ್ಲ. ಮಾವಂದಿರಾದ ಅವರಿಂದ 25 ಸಾವಿರ ರೂ. ಸಾಲ ಪಡೆದಿದ್ದಾಗಿ ಅರ್ಜಿದಾರ ನಮ್ಮನ್ನು ನಂಬುವಂತೆ ಮಾಡಿದ್ದ. ಅರ್ಜಿದಾರನ ಕೈಯಲ್ಲಿ ಹಣವನ್ನು ಕೊಟ್ಟರೆ ಅವನು ಸರಿಯಾಗಿ ಆ ಯಜಮಾನರಿಗೆ ಮುಟ್ಟಿಸುತ್ತಾನೋ

ಇಲ್ಲವೋ ಎಂಬ ಅನುಮಾನ ನಮ್ಮ ಮನಸ್ಸಿಗೆ ಬಂದು ಆ ಯಜಮಾನರ ಹೆಸರಿಗೆ ಚೆಕ್ಕನ್ನು ಕಳುಹಿಸಿದೆವು. ಅರ್ಜಿದಾರ ನಮಗಿಂತ ಹೆಚ್ಚು ಬುದ್ಧಿವಂತನಾಗಿದ್ದ! ತನ್ನ ಹೆಂಡತಿಯ ಕೈಯಲ್ಲಿ ಚೆಕ್ಕನ್ನು ಕಳುಹಿಸಿ ಮಾವಂದಿರಿಂದ ಸಹಿಮಾಡಿಸಿಕೊಂಡು ಹಣ ಪಡೆಯಬೇಕೆಂದುಕೊಂಡಿದ್ದ ಅರ್ಜಿದಾರನ ಹವಣಿಕೆ ಫಲಿಸಲಿಲ್ಲ. ಮಗಳು ತವರೂರಿಗೆ ಬಂದು ತಮ್ಮ ಹೆಸರಿಗೆ ಮಠದಿಂದ ತಂದಿದ್ದ 25 ಸಾವಿರ ರೂ. ಗಳ ಆ ಚೆಕ್ಕನ್ನು ನೋಡಿ ವಿಷಯ ತಿಳಿದು ಆ ಯಜಮಾನರು ಹಾವು ಕಚ್ಚಿದವರಂತೆ ಹೌಹಾರಿ ರಾತ್ರಿಯೆಲ್ಲಾ ಸರಿಯಾಗಿ ನಿದ್ರೆ ಮಾಡದೆ ಊಟತಿಂಡಿ ಸಹ ಮಾಡದೆ, ಬಾಯಲ್ಲಿ ಒಂದು ತೊಟ್ಟು ನೀರು ಹಾಕದೆ ಮಾರನೆಯ ಮುಂಜಾನೆ ರೈಲು ಹತ್ತಿ ಸಿರಿಗೆರೆಗೆ ಬಂದು ನಮ್ಮನ್ನು ಕಂಡರು. 'ನಾನು ನನ್ನ ಅಳಿಯನಾದ ಅರ್ಜಿದಾರನಿಗೆ ಯಾವ ಸಾಲವನ್ನೂ ಕೊಟ್ಟಿಲ್ಲ. ಮಠದ ಹಣವನ್ನು ಅನ್ಯಾಯವಾಗಿ ಪಡೆದು ನಾನು ಯಾವ ನರಕಕ್ಕೆ ಹೋಗಲಿ, ವಾಪಾಸ್ ತೆಗೆದುಕೊಳ್ಳಿ' ಎಂದು ಅವರ ಕೈಯಲ್ಲಿದ್ದ ಚೆಕ್ಕನ್ನು ನಮ್ಮ ಮುಂದಿಟ್ಟರು! ಈಗಾಗಲೇ ಪ್ರಕರಣ ಇತ್ಯರ್ಥಗೊಂಡು ಎಲ್ಲರ ಸಹಿಯಾಗಿ ಮಠದ ಅಕೌಂಟಿನಲ್ಲಿ ಖರ್ಚು ಬಿದ್ದಿದೆ ಎಂದು ಹೇಳಿದರೂ ಅಜ್ಜ ತನ್ನ ಪಟ್ಟು ಬಿಡಲಿಲ್ಲ. ಅದನ್ನು ವಾಪಾಸು ತೆಗೆದುಕೊಳ್ಳುವವರೆಗೂ ಮಠದಲ್ಲಿ ಪ್ರಸಾದ ಸ್ವೀಕರಿಸುವುದಿಲ್ಲವೆಂದೂ, ಉಪವಾಸ ಮಾಡಿ ಇಲ್ಲಿಯೇ ಪ್ರಾಣಬಿಡುತ್ತೇನೆಂದೂ ಖಡಾಖಂಡಿತವಾಗಿ ಅಜ್ಜ ಹೇಳಿತು. ಅಜ್ಜನ ನ್ಯಾಯನಿಷ್ಠುರತೆಯ ಮುಂದೆ ನಮ್ಮ ನ್ಯಾಯಪೀಠ ಸೋತಿತ್ತು! ಕೂಡಲೇ ಮಠದ ಅಕೌಂಟೆಂಟ್ ಕರೆದು ಅಜ್ಜನ ಹೆಸರಿನಲ್ಲಿ ಒಂದು ದತ್ತಿಯನ್ನು ಸ್ಥಾಪಿಸಿ ಅದರ ಮೇಲೆ ಬರುವ ಬಡ್ಡಿಯಿಂದ ಬಡಮಕ್ಕಳಿಗೆ ವಿದ್ಯಾರ್ಥಿವೇತನ ನೀಡುವಂತೆ ಆದೇಶಿಸಿದೆವು. ಅದಕ್ಕೂ ಅಜ್ಜನನ್ನು ಒಪ್ಪಿಸಲು ಹರಸಾಹಸಮಾಡಬೇಕಾಯಿತು. ಚಿತ್ತಶುದ್ಧಿ ಮತ್ತು ದ್ರವ್ಯಶುದ್ಧಿ - ಇವುಗಳಲ್ಲಿ ಯಾವುದು ಮೊದಲು, ಯಾವುದು ನಂತರ? ಚಿತ್ತಶುದ್ಧವಿಲ್ಲದೆ, ದ್ರವ್ಯಶುದ್ಧಿ ಸಾಧ್ಯವಿಲ್ಲ. ದ್ರವ್ಯಶುದ್ಧಿ ಸಾಧಿಸದೆ ಚಿತ್ತಶುದ್ಧಿ ಸಾಧಿಸಲು ಸಾಧ್ಯವಾಗದು. ಬೀಜ-ವೃಕ್ಷ ನ್ಯಾಯದಂತೆ! ಬೀಜವಿಲ್ಲದೆ ಮರ ಹುಟ್ಟಲು ಸಾಧ್ಯವಿಲ್ಲ, ಮರವಿಲ್ಲದೆ ಬೀಜ ಹುಟ್ಟಲು ಸಾಧ್ಯವಿಲ್ಲ. ಅದುವೇ ಈ ಸೃಷ್ಟಿಯ ಸೋಜಿಗ! "ಧನವನಿರಿಸದಿರಾ, ಇರಿಸಿದರೆ ಭವ ಬಪ್ಪುದು ತಪ್ಪದು....", "ಕಣ್ಣಿನಲಿ ನೋಡಿ, ಮಣ್ಣಿನಲಿ ನೆರಹಿ, ಉಣ್ಣದೆ ಹೋಗದಿರಾ!..." ಇತ್ಯಾದಿ ಬಸವಣ್ಣನವರ ವಚನಗಳನ್ನು ಕುರಿತು ವೇದಿಕೆಗಳ ಮೇಲೆ ಭಾಷಣ ಬಿಗಿಯುವ ಜನ ಅವರಾಗಿರಲಿಲ್ಲ. ಅವರ ಹಿರಿಯರು ಹಾಕಿಕೊಟ್ಟ ದಾರಿಯಲ್ಲಿ ಪ್ರಾಮಾಣಿಕವಾಗಿ ಬದುಕಲು ಬಯಸಿದ ಮುತ್ಸದ್ದಿಗಳು ಅವರು. ಹಿರಿಯ ತಲೆಮಾರಿನ ಈ ಜನರ ಆದರ್ಶ ನವಪೀಳಿಗೆಗೆ ಮೇಲ್ಪಂಕ್ತಿಯಾಗಬೇಕಾಗಿದೆ.

ಅನೇಕ ಮಠಮಾನ್ಯಗಳಂತೆ ನಮ್ಮ ಮಠವೂ ಉತ್ತರ ಕರ್ನಾಟಕದ ನೆರೆ ಸಂತ್ರಸ್ತರಿಗೆ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಕೈಗೊಂಡಿದ್ದು ಅದಕ್ಕಾಗಿ ಬ್ಯಾಂಕಿನಲ್ಲಿ ಒಂದು ಪ್ರತ್ಯೇಕ ಖಾತೆಯನ್ನು ತೆರೆಯಲಾಗಿದೆ. ನಮ್ಮ ಆಶಯದಂತೆ ಶಿಷ್ಯರು ಲಕ್ಷಾಂತರ ರೂ. ಹಣವನ್ನು ಕಳುಹಿಸಿಕೊಡುತ್ತಿದ್ದಾರೆ. ಈ ಸಂಬಂಧವಾಗಿ ಮೊನ್ನೆ ತಾನೆ ಬೆಂಗಳೂರಿನ ನಮ್ಮ ತರಳಬಾಳು ಕೇಂದ್ರದಲ್ಲಿ ಕರೆದಿದ್ದ ಅನೌಪಚಾರಿಕ ಸಭೆಯಲ್ಲಿ ಶಿಷ್ಯರು ಸ್ವಯಂಸ್ಫೂರ್ತಿಯಿಂದ ಉದಾರವಾಗಿ ಲಕ್ಷಾಂತರ ರೂ. ದೇಣಿಗೆಯನ್ನು ನೀಡಿದರು. ಒಂದು ವಿಶೇಷತೆ ಎಂದರೆ ಅಂದಿನ ಸಭೆಯಲ್ಲಿ ನಮಗೆ ಸುಪರಿಚಿತರಾದ ಜರ್ಮನಿಯ ಮಹಿಳೆಯೊಬ್ಬರು ಹಾಜರಿದ್ದರು. ಬಹಳ ಹಿಂದೆ ಅವರು ಯುವವಯಸ್ಸಿನಲ್ಲಿ ಅಧ್ಯಯನಾರ್ಥವಾಗಿ ಸಿರಿಗೆರೆಗೆ ಬಂದಿದ್ದರು. ಜರ್ಮನಿಗೆ ಅನೇಕ ಬಾರಿ ನಾವು ಹೋಗಿದ್ದರೂ ಅವರೊಂದಿಗೆ ಕೇವಲ ದೂರವಾಣಿಯಲ್ಲಿ ಸಂಭಾಷಣೆ ನಡೆಯುತ್ತಿತ್ತೇ ಹೊರತು ಮುಖತಃ ಅವರ ನಮ್ಮ ಭೇಟಿಯಾಗಿದ್ದು 28 ವರ್ಷಗಳ ನಂತರ ಮತ್ತೆ ಸಿರಿಗೆರೆಯಲ್ಲಿ! ವಯಸ್ಸಿನ ಕಾರಣ ತಲೆಗೂದಲು ಬೆಳ್ಳಗಾಗಿದ್ದರೂ ಅವರ ಮುಖದ ಕಾಂತಿ ಮಾತ್ರ ಕುಂದಿರಲಿಲ್ಲ. ಅವರ ಹೆಸರು ಗೀತಾ ಧರಮ್‌ಪಾಲ್-ಫ್ರಿಕ್. ಜರ್ಮನಿಯ ಹೈಡೆಲ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿದ್ದಾರೆ. ಭಾರತೀಯರಾಗಿದ್ದ ಅವರ ತಂದೆ ಧರಮ್‌ಪಾಲ್ ಇತಿಹಾಸಜ್ಞರೂ, ಚಿಂತಕರೂ ಹಾಗೂ ಸ್ವಾತಂತ್ರ್ಯ ಕಾಲದ ಅಪ್ಪಟ ದೇಶಭಕ್ತರು ಆಗಿದ್ದರು. ಪಿಂಚಣಿಗಾಗಿ ಪರಿತಪಿಸುವ 'ಆಧುನಿಕ ಸ್ವಾತಂತ್ರ್ಯ ಯೋಧರು' ಅವರಾಗಿರಲಿಲ್ಲ! ಅವರು ಮೂಲತಃ ಉತ್ತರ ಪ್ರದೇಶದ ಮುಜಫುರ್ ಜಿಲ್ಲೆಯವರು. ಗಾಂಧೀಜೀಯ Quit India Movement (1942-43) ನಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಅವರಿಗೆ ಆಗ ಕೇವಲ 20 ವರ್ಷ ವಯಸ್ಸಾಗಿತ್ತು. ಮಹಾತ್ಮಾ ಗಾಂಧೀಜಿಗೆ ಆಪ್ತಸಹಾಯಕಿಯಾಗಿ ನೆರವಾಗಿದ್ದ ಮೀರಾಬೇನ್ ಜೊತೆಗೆ ಹಲವು ವರ್ಷಗಳ ಕಾಲ ವಾರ್ಧಾದ ಸೇವಾಗ್ರಾಮದಲ್ಲಿ ಕೆಲಸಮಾಡಿದವರು. ಪ್ರೊಫೆಸರ್ ಗೀತಾ ಅವರ ತಂದೆ ಅಪ್ಪಟ ಭಾರತೀಯರಾಗಿದ್ದರೂ ತಾಯಿ ಇಂಗ್ಲೆಂಡ್ ದೇಶದವರು. ಪತಿ ಜರ್ಮನಿಯವರು. ಅವರಿಗೆ ಇಬ್ಬರು ಮಕ್ಕಳಿದ್ದು ಇಬ್ಬರಿಗೂ ಅಪ್ಪಟ ಭಾರತೀಯ ಹೆಸರುಗಳನ್ನು ಇಟ್ಟಿದ್ದಾರೆ - ಆನಂದ ಮತ್ತು ಮೀರಾ. ಹಿರಿಯ ಮಗ ಆನಂದ ಅಮೇರಿಕೆಯ ಪ್ರಸಿದ್ಧ ವಿಶ್ವವಿದ್ಯಾನಿಲಯವಾದ ಹಾರ್ವರ್ಡ್‌ನಲ್ಲಿ Moral Philosophy ಯ ಮೇಲೆ ಡಾಕ್ಟರೇಟ್ ಮಾಡುತ್ತಿದ್ದರೆ, ಮಗಳು ಮೀರಾ ಅಮೇರಿಕೆಯ ಮತ್ತೊಂದು ಪ್ರಸಿದ್ಧ ವಿಶ್ವವಿದ್ಯಾನಿಲಯವಾದ ಬರ್ಕಲಿಯಲ್ಲಿ Mathematics ಅಭ್ಯಸಿಸುತ್ತಿದ್ದಾಳೆ. ಪ್ರೊಫೆಸರ್ ಗೀತಾ ಧರಮ್‌ಪಾಲ್ ರಜೆಯ (Subbatical Leave) ಮೇಲೆ ಭಾರತಕ್ಕೆ ಬಂದಿದ್ದು ಗಾಂಧೀಜಿಯ 'ಸೇವಾಗ್ರಾಮ್'ದಲ್ಲಿ ಕೆಲವು ದಿನಗಳ ಕಾಲ ತಂಗಿದ್ದು ನಮ್ಮನ್ನು ನೋಡಲು ಕಳೆದ ವಾರ ಸಿರಿಗೆರೆಗೆ ಬಂದಿದ್ದರು. ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಪ್ರೊಫೆಸರ್ ಆದವರಿಗೆ ನಾಲ್ಕು ವರ್ಷಗಳಿಗೊಮ್ಮೆ ಆರು ತಿಂಗಳ ಕಾಲ ರಜೆ ಸಿಗುತ್ತದೆ. ಅದಕ್ಕೆ 'ಸಬಾಟಿಕಲ್ ಲೀವ್' (Subbatical Leave) ಎಂದು ಕರೆಯುತ್ತಾರೆ. ಈ ರಜಾ ಅವಧಿಯಲ್ಲಿ ಅವರು ತಮ್ಮ ಪರಿವಾರದ ಸದಸ್ಯರೊಂದಿಗೆ ಅಡ್ಡಾದಿಡ್ಡಿ ತಿರುಗಾಡಿಕೊಂಡು ಮೋಜು ಮಾಡದೆ ತಾವು ಬೋಧಿಸುವ ವಿಷಯಕ್ಕೆ ಸಂಬಂಧಿಸಿದಂತೆ ಆಳವಾದ ಅಧ್ಯಯನ ಮಾಡುತ್ತಾರೆ. ಇತಿಹಾಸದ ಪ್ರಾಧ್ಯಾಪಕಿಯಾದ ಅವರು ಮೊನ್ನೆ ಸಿರಿಗೆರೆಗೆ ಬಂದಾಗ ಹಂಪಿಗೆ ಹೋಗಿ ಅವರಿಗೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಬಂದು ಸಂತೋಷ ವ್ಯಕ್ತಪಡಿಸಿದರು.

ಬೆಂಗಳೂರಿನ ನಮ್ಮ ತರಳಬಾಳು ಕೇಂದ್ರದ ಅನೌಪಚಾರಿಕ ಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸಿದ ಪ್ರೊಫೆಸರ್ ಗೀತಾ ಧರಮ್‌ಪಾಲ್ ಅವರು ಮಾರನೆಯ ದಿನ ನಮ್ಮನ್ನು ಖಾಸಗಿಯಾಗಿ ಭೇಟಿಮಾಡಿ ಬೀಳ್ಕೊಳ್ಳುವಾಗ ಒಂದು ಲಕೋಟೆಯನ್ನು ಕೊಟ್ಟು ಅದರಲ್ಲಿರುವ ಹಣವನ್ನು ಉತ್ತರಕರ್ನಾಟಕದ ನೆರೆ ಸಂತ್ರಸ್ತರಿಗೆ ಬಳಸಲು ಕೇಳಿಕೊಂಡರು. ಲಕೋಟೆಯಲ್ಲಿದ್ದ ಚೆಕ್ಕನ್ನು ಹೊರತೆಗೆದು ನೋಡಿದಾಗ ಅದರಲ್ಲಿ ಒಂದು ಲಕ್ಷ ರೂ. ಗಳನ್ನು ಪ್ರವಾಹ ಪರಿಹಾರ ನಿಧಿಗೆ ದೇಣಿಗೆಯಾಗಿ ಕೊಟ್ಟಿದ್ದರು! "Please excuse me for not writing additional one Rupee at the end of one lakh as per Indian custom" (ಭಾರತೀಯ ಸಂಪ್ರದಾಯದ ಪ್ರಕಾರ ಒಂದು ಲಕ್ಷ ರೂಪಾಯಿಯ ಕೊನೆಯಲ್ಲಿ ಮತ್ತೊಂದು ರೂಪಾಯಿ ಸೇರಿಸಿ ಬರೆಯದೇ ಇದ್ದುದಕ್ಕೆ ದಯಮಾಡಿ ಕ್ಷಮಿಸಿರಿ) ಎಂದು

ಮೆಲುದನಿಯಲ್ಲಿ ಕ್ಷಮಾಯಾಚನೆ ಮಾಡಿದರು. ಅವರು ಒಂದು ಒಳ್ಳೆಯ ಉದ್ದೇಶಕ್ಕಾಗಿ ಅಷ್ಟೊಂದು ದೊಡ್ಡ ಮೊತ್ತದ ದೇಣಿಗೆಯನ್ನು ನೀಡಿದ್ದು ನಮಗೆ ಅನಿರೀಕ್ಷಿತವಾದರೂ ಅಪಾರ ಸಂತೋಷವನ್ನುಂಟುಮಾಡಿತ್ತು. ಅವರ ಆ ಔದಾರ್ಯವನ್ನು ನೋಡಿ ಬೈಬಲ್ಲಿನ ಈ ಮುಂದಿನ ಸಾಲು ನೆನಪಾಯಿತು: 'ದಾನ ಮಾಡುವಾಗ ಬಲಗೈಯಿಂದ ಕೊಟ್ಟದ್ದು ಎಡಗೈಗೆ ಗೊತ್ತಾಗಬಾರದು' (When you give alms, do not let your left hand know what your right hand is doing). ಬೈಬಲ್‌ನ ಈ ಉಪದೇಶವನ್ನು ಶಾಬ್ದಿಕವಾಗಿ ಅರ್ಥೈಸುವುದಾದರೆ ಅವರು ಕೊಟ್ಟದ್ದು ಎಡಗೈ ಮತ್ತು ಬಲಗೈ ಎರಡಕ್ಕೂ ಗೊತ್ತಾಗಿತ್ತು. ಏಕೆಂದರೆ ಅವರು ನಮ್ಮ ಎದುರಿಗೆ ಬಲಭಾಗದ ಆಸನದಲ್ಲಿ ಕುಳಿತಿದ್ದು ತಮ್ಮ ಪರ್ಸ್‌ನಿಂದ ಬಲಗೈಯಲ್ಲಿ ಲಕೋಟೆಯನ್ನು ಹೊರತೆಗೆದು ಎಡಗೈಯಲ್ಲಿ ನಮಗೆ ಕೊಟ್ಟಿದ್ದರು! ವಿದೇಶೀಯರಲ್ಲಿ ಏನನ್ನಾದರೂ ಕೊಡುವಾಗ ಬಲಗೈಯಲ್ಲೇ ಕೊಡಬೇಕು, ಎಡಗೈಯಲ್ಲಿ ಕೊಡಬಾರದು ಎಂಬ ರೀತಿರಿವಾಜು ಇಲ್ಲ. ನಮ್ಮ ದೇಶದಲ್ಲಿ ಗುರುಗಳಿಗೆ ಕಾಣಿಕೆಯನ್ನು ಕೊಡುವಾಗ ಮುಗ್ಧ ಮಕ್ಕಳು ಎಡಗೈಯಲ್ಲಿ ಕೊಡಲು ಮುಂದಾದಾರೆ ತಾಯಂದಿರು ಗದರಿಸಿ ಬಲಗೈಯಲ್ಲಿ ಕೊಡುವುದನ್ನು ಕಲಿಸುತ್ತಾರೆ. ಏಕೆಂದು ಮಕ್ಕಳು ತಂದೆತಾಯಿಗಳನ್ನು ಪ್ರಶ್ನೆ ಮಾಡದೆ ವಿಧೇಯತೆಯಿಂದ ಪಾಲಿಸುತ್ತಾರೆ. ಇದು ಭಾರತೀಯ ಸಂಸ್ಕೃತಿ. ಇದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಮಕ್ಕಳಿಗೆ ಕೇವಲ ಸಮಾಜದ ರೀತಿರಿವಾಜುಗಳನ್ನು ಹೇಳಿಕೊಟ್ಟರೆ ಸಾಲದು. ಅವುಗಳ ಹಿಂದಿರುವ ತಾತ್ವಿಕ ಅರ್ಥವನ್ನೂ ಮನವರಿಕೆ ಮಾಡಿಕೊಡಬೇಕು. ಎಷ್ಟೋ ವೇಳೆ ಮಕ್ಕಳು ಕೇಳುವ ಪ್ರಶ್ನೆಗಳಿಗೆ ತಂದೆತಾಯಿಗಳಿಗೇ ಉತ್ತರ ಗೊತ್ತಿಲ್ಲದೆ 'ತಲೆಹರಟೆ, ಮಾತನಾಡಬೇಡ' ಎಂದು ಗದರಿಸಿದರೆ ಮಕ್ಕಳ ಬುದ್ಧಿ ಬೆಳೆಯುವುದಾದರೂ ಹೇಗೆ? ಗೀತಾ ಧರಮ್‌ಪಾಲ್‌ರವರು ಬೆಳೆದದ್ದು ಪಾಶ್ಚಾತ್ಯ ಸಂಸ್ಕೃತಿಯಲ್ಲಾದರೂ ಭಾರತದ ಬಗ್ಗೆ ಅಪಾರ ಅಭಿಮಾನವುಳ್ಳವರಾಗಿದ್ದಾರೆ. ನಮ್ಮ ದೇಶದ ಯುವವೈದ್ಯರು ಮತ್ತು ಸಾಫ್ಟ್‌ವೇರ್ ಇಂಜಿನಿಯರುಗಳು ಅಮೇರಿಕಾ ದೇಶಕ್ಕೆ ಹೋದ ಕೆಲವೇ ವರ್ಷಗಳಲ್ಲಿ ಅಲ್ಲಿಯ 'ಹಸಿರುಕಾರ್ಡು' (Green Card) ಪಡೆದು ನಂತರ ಅಮೇರಿಕಾ ದೇಶದ ಪೌರತ್ವವನ್ನು ಪಡೆಯಲು ತವಕಿಸುವ ಇಂದಿನ ದಿನಮಾನಗಳಲ್ಲಿ ಹೆತ್ತ ತಾಯಿ ಇಂಗ್ಲೆಂಡ್ ದೇಶದವಳಾದರೂ ಭಾರತೀಯ ಸಂಜಾತೆಯಾದ ಜರ್ಮನಿಯ ಈ ಪ್ರೊಫೆಸರ್ ಗೀತಾ ಧರಮ್‌ಪಾಲ್‌ರವರು ಈಗಲೂ ಭಾರತೀಯ ಪೌರತ್ವವನ್ನೇ (Indian Citizenship) ಹೊಂದಿದ್ದಾರೆಂದರೆ ನಿಮಗೆ ಆಶ್ಚರ್ಯವಾಗಬಹುದಲ್ಲವೇ? ಇದಕ್ಕೆಲ್ಲಾ ಮುಖ್ಯ ಕಾರಣ ಗಾಂಧೀಜಿಯ ಒಡನಾಡಿಗಳಾಗಿದ್ದ ಅವರ ತಂದೆ ಧರಮ್‌ಪಾಲ್‌ರವರು ತಮ್ಮ ಹೆಸರಿಗೆ ತಕ್ಕಂತೆ ಮಗಳಿಗೆ ಧರ್ಮಮಾರ್ಗದಲ್ಲಿ ನಡೆಯಲು ನೀಡಿದ ಉತ್ತಮ ಧಾರ್ಮಿಕ ಸಂಸ್ಕಾರ ಮತ್ತು ಸಾಮಾಜಿಕ ಸೇವಾಭಾವನೆಗಳಲ್ಲದೆ ಮತ್ತೇನಿರಲು ಸಾಧ್ಯ!

2.12.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑